ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಶೈಶಾ-4/ವಿ.ಕ್ರಿ.ಯೋ/2021-22 ದಿನಾಂಕ:20.12.2021

## ಸುತ್ತೋಲೆ

ವಿಷಯ: 2021-21ನೇ ಸಾಲಿಗೆ SCSP ಯೋಜನೆಯಡಿಯಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ "ವಿಶ್ವಾಸ ಕಿರಣ" ವಿಶೇಷ ಆಂಗ್ಲ ಭಾಷಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: 1. ಕರ್ನಾಟಕ ಸರ್ಕಾರದ ನಡವಳಿಗಳು ದಿನಾಂಕ 09.09.2021

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯು 2021-22ನೇ ಶೈಕ್ಷಣಿಕ ಸಾಲಿನ ರಾಜ್ಯದ 470 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ SCSP ಯೋಜನೆಯಡಿಯಲ್ಲಿ "ವಿಶ್ವಾಸ ಕಿರಣ" ಇಂಗ್ಲೀಷ್ ಭಾಷಾ ವಿಶೇಷ ಬೋಧನೆಯನ್ನು ದಿನಾಂಕ: 27.12.2021 ರಿಂದ ದಿನಾಂಕ: 24.01.2022 (ಸರ್ಕಾರಿ ರಜಾ ದಿನಗಳು ಹಾಗೂ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ) ರವರೆಗೆ ಒಟ್ಟು 24 ದಿನಗಳು ಹಮ್ಮಿಕೊಳ್ಳಲಾಗಿದೆ.

**ಇಂಗ್ಲೀಷ್ ಭಾಷಾ ವಿಶೇಷ ಬೋಧನಾ ಕಾರ್ಯಕ್ರಮದ ರೂಪರೇಷೆಗಳು ಈ ಕೆಳಗಿನಂತಿವೆ:**

- ❖ ರಾಜ್ಯದ 470 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತರಬೇತಿ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. (ಪ್ರತಿ ಲಗತ್ತಿಸಿದೆ)

**ಜಿಲ್ಲಾ ಉಪನಿರ್ದೇಶಕರ ಜವಾಬ್ದಾರಿಗಳು.**

- ❖ ಈ ತರಬೇತಿ ಕಾರ್ಯಕ್ರಮದ ಉಸ್ತುವಾರಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಗಳ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಸಹಕಾರದೊಂದಿಗೆ ನಿರ್ವಹಿಸುವುದು.
- ❖ ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯ ಪ್ರತಿ ನಿಗದಿತ ಕಾಲೇಜಿಗೆ ಒಬ್ಬ ಹಿರಿಯ ಆಂಗ್ಲ ಭಾಷಾ ಉಪನ್ಯಾಸಕರನ್ನು / ಪ್ರಾಂಶುಪಾಲರನ್ನು ಸಂಯೋಜಕರನ್ನಾಗಿ ನೇಮಿಸುವುದು.
- ❖ ಈ ಕಾರ್ಯಕ್ರಮದಲ್ಲಿ ಕಾಲೇಜಿನ ದ್ವಿತೀಯ ಪಿಯುಸಿ ಎಲ್ಲಾ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗುವಂತೆ ಕ್ರಮವಹಿಸಲು ಜಿಲ್ಲಾ ಉಪನಿರ್ದೇಶಕರು ತರಬೇತಿ ನಡೆಯುವ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಸೂಚಿಸುವುದು.

..2

- ❖ ತರಬೇತಿ ಮುಗಿದ ತಕ್ಷಣ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಕಾಲೇಜುವಾರು ಹಾಜರಾತಿಯನ್ನು ಕ್ರೋಢೀಕರಿಸಿ, ಕೇಂದ್ರ ಕಛೇರಿಗೆ ಕೆಳಕಂಡ ಇ-ಮೇಲ್‌ಗೆ ಸಲ್ಲಿಸುವುದು. ಇ-ಮೇಲ್ ವಿಳಾಸ: **vishwasakirana2021@gmail.com** .
- ❖ ತರಬೇತಿ ನಡೆಯುವ ಕಾಲೇಜಿನ ಪ್ರಾಂಶುಪಾಲರಿಂದ ಸಲ್ಲಿತವಾದ ಸಂಕ್ಷಿಪ್ತ ವರದಿಯನ್ನು ಕ್ರೂಢೀಕರಿಸಿ, ಜಂಟಿ ನಿರ್ದೇಶಕರು (ಶೈಕ್ಷಣಿಕ ಶಾಖೆ), ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸುವುದು.

**ಪ್ರಾಂಶುಪಾಲರು/ಸಂಯೋಜಕರ ಜವಾಬ್ದಾರಿಗಳು.**

- ❖ ಕಾಲೇಜಿನ ದೈನಂದಿನ ತರಗತಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ, ಕಾಲೇಜಿನ ಆರಂಭದ ವೇಳೆಗಿಂತ ಮುಂಚಿತವಾಗಿ ಅಥವಾ ಕಾಲೇಜು ವೇಳೆ ಮುಗಿದ ನಂತರ ದಿನಕ್ಕೆ 60 ನಿಮಿಷಗಳ 01 ಅವಧಿಯನ್ನು ಒಳಗೊಂಡ 24 ದಿನಗಳಿಗೆ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.
- ❖ ತರಬೇತಿ ಕೇಂದ್ರದ ಸಂಯೋಜಕರು ಜಿಲ್ಲಾ ಉಪನಿರ್ದೇಶಕರ ನಿರ್ದೇಶನದಂತೆ, ಆಂಗ್ಲ ಭಾಷಾ ವಿಷಯದಲ್ಲಿ ನುರಿತ ಹಿರಿಯ ಉಪನ್ಯಾಸಕ/ವಿಷಯ ತಜ್ಞರನ್ನು ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಿಂದ ಗುರುತಿಸಿ, ತರಬೇತಿ ನೀಡಲು ನಿಯೋಜಿಸಬೇಕಾಗಿದೆ.
- ❖ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂಯೋಜಕರಿಗೆ ಹಾಗೂ ಉಪನ್ಯಾಸಕರಿಗೆ / ವಿಷಯ ತಜ್ಞರಿಗೆ ನಿಗಧಿತ ಸಂಭಾವನೆಯನ್ನು ನೀಡುವುದು.
- ❖ ಬಯೋಮೆಟ್ರಿಕ್ ಹಾಜರಾತಿಯನ್ನು ತೆಗೆದುಕೊಳ್ಳುವುದು.
- ❖ ಪ್ರತಿ ತಂಡಕ್ಕೆ ಗರಿಷ್ಠ 25 ವಿದ್ಯಾರ್ಥಿಗಳನ್ನು ನಿಗಧಿಪಡಿಸುವುದು.
- ❖ ಕೋವಿಡ್ -19ರ ಎಸ್‌ಒಪಿ ಯನ್ನು ತಪ್ಪದೇ ಪಾಲಿಸುವುದು.
- ❖ ಪ್ರಾಂಶುಪಾಲರು ತರಬೇತಿ ಕಾರ್ಯಕ್ರಮವನ್ನು ಕಡ್ಡಾಯವಾಗಿ ನಿರ್ವಹಿಸಿ, ಮೇಲ್ವಿಚಾರಣೆ ನಡೆಸುವುದು.
- ❖ ಪ್ರಾಂಶುಪಾಲರು, ತರಬೇತಿ ಕಾರ್ಯಕ್ರಮದ ಸಂಕ್ಷಿಪ್ತ ವರದಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.
- ❖ ಪ್ರತಿ ದಿನದ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು ಹಾಗೂ ತರಬೇತಿ ನಡೆಯುವ ಸಮಯದಲ್ಲಿನ ಭಾವಚಿತ್ರಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಇ-ಮೇಲ್ ಅಥವಾ Whatsapp ಮುಖಾಂತರ ಕಳುಹಿಸುವುದು.
- ❖ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂಯೋಜಕರಿಗೆ ಹಾಗೂ ಉಪನ್ಯಾಸಕರಿಗೆ / ವಿಷಯ ತಜ್ಞರಿಗೆ ನಿಗಧಿತ ಸಂಭಾವನೆಯನ್ನು ನೀಡುವುದು.

**ಸಂಪನ್ಮೂಲ ವ್ಯಕ್ತಿಗಳ ಜವಾಬ್ದಾರಿಗಳು.**

- ❖ ತರಬೇತಿ ನೀಡುವ ವಿಷಯದಲ್ಲಿ ಕಠಿಣ ಅಧ್ಯಾಯಗಳನ್ನು, ವಾರ್ಷಿಕ ಪರೀಕ್ಷೆಗೆ ಪೂರಕವಾಗಿರುವಂತಹ ಉಪಯುಕ್ತ ಪ್ರಶ್ನೆಪತ್ರಿಕೆಗಳನ್ನು, ವ್ಯಾಕರಣ ಕಲಿಕೆ ಹಾಗೂ ಮಾತನಾಡುವ ಕಲೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿಯನ್ನು ನೀಡುವುದು. (ಪಠ್ಯ ವಸ್ತು ಲಗತ್ತಿಸಿದೆ)
- ❖ ಪ್ರಾಂಶುಪಾಲರು ನೀಡುವ ವೇಳಾಪಟ್ಟಿಯಂತೆ ತರಗತಿಗಳನ್ನು ತೆಗೆದುಕೊಳ್ಳುವುದು.
- ❖ ತರಬೇತಿಯ ಕೊನೆಯ ದಿನ 100 ಅಂಕಗಳ ಒಂದು ಪರೀಕ್ಷೆಯನ್ನು ನಡೆಸಿ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ, ಫಲಿತಾಂಶವನ್ನು ಸಂಯೋಜಕರು ಸಂಗ್ರಹಿಸಿ ಇಡುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.